<u>ಕ್ರಿಮಿನಲ್ ಕೇಸ್ ನಂ.681/2019</u>

ಪಿ.ಡಬ್ಲೂ:2

ಸಾಕ್ಷಿಯನ್ನು ಇಂದು ದಿನಾಂಕ 27-12-2023 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು

<u>ಮುಖ್ಯ ವಿಚಾರಣೆ : ಶ್ರೀ ವಿ ಎಲ್ ಎಮ್ ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅದರಲ್ಲಿರುವ ಸಹಿ/ ಗುರುತು ನನ್ನದಾಗಿರುತ್ತದೆ.

ನನ್ನ ಪರ ಕೆಲವೊಂದು ದಾಖಲೆಗಳನ್ನು ಹಾಜರುಪಡಿಸುತ್ತಿದೇನೆ, ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಲು ಪ್ರಾರ್ಥಿಸುತ್ತೇವೆ.

ಸಾಕ್ಷಿಗೆ ಈಗ ನಿಪಿ 6 ಕೈಗಡ ಪತ್ರ ದಾಖಲೆ ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅನ್ನು ನಿಪಿ. 6 ಸಿ ಎಂದು ಗುರುತಿಸಲಾಯಿತು. ನಿಪಿ 6 ಕ್ಕೆ ಮೊದಲು ಸಹಿ ಆರೋಪಿತನೆ ಹಾಕಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 6 ಡಿ ಎಂದು ಗುರುತಿಸಲಾಯಿತು. ಆರೋಪಿತನ ಮಾವ ಮತ್ತು ಆತನ ಹೆಂಡತಿ ಕೂಡಾ ಆ ದಾಖಲೆಗೆ ಸಹಿ ಮಾಡಿರುತ್ತಾರೆ. ಅದು ಅಲ್ಲದೇ ದೀಪಕಗೌಡ ಮತ್ತು ನಾನು ನಮ್ಮ ಸಮಕ್ಷಮ ವ್ಯವಹಾರ ಆಗಿದ್ದರಿಂದ ಸಹಿ ಹಾಕಿರುತ್ತೇನೆ.

**<u>ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ